# ಕರ್ನಾಟಕ ವಿಧಾನಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **162(138)** |
| **ಸದಸ್ಯರ ಹೆಸರು** | **ಶ್ರೀ ಮುನಿರಾಜು ಗೌಡ ಪಿ.ಎಂ (ವಿಧಾನ ಸಭೆಯಿಂದ ಚುನಾಯಿತರಾದವರು)** |
| **ವಿಷಯ** | **ಕೊರೋನಾ ಸೋಂಕಿಗೆ ಬಲಿಯಾದ ವ್ಯಕ್ತಿಗಳ ಕುಟುಂಬಕ್ಕೆ ಪರಿಹಾರ ಕುರಿತು.** |
| **ಉತ್ತರಿಸಬೇಕಾದ ದಿನಾಂಕ** | **16.02.2022** |
| **ಉತ್ತರಿಸುವ ಸಚಿವರು** | **ಕಂದಾಯ ಸಚಿವರು** |
| **ಪ್ರಶ್ನೆ** | **ಉತ್ತರ** |
| ಅ)ರಾಜ್ಯದಲ್ಲಿ ಕೊರೋನ ಒಂದು ಮತ್ತು ಎರಡನೆಯ ಅಲೆಗಳಲ್ಲಿ ಕೊರೋನಾ ಸೋಂಕಿನಿಂದ ಮೃತಪಟ್ಟವರ ಒಟ್ಟು ಸಂಖ್ಯೆ ಎಷ್ಟು? | ಆರೋಗ್ಯ ಇಲಾಖೆಯ Covid death ಬುಲೆಟಿನ್ ಅನ್ವಯ ದಿನಾಂಕ: 10.02.2022 ರವರೆಗೆ ರಾಜ್ಯದಲ್ಲಿ ಒಟ್ಟು 39531 ಕೋವಿಡ್-19 ಮೃತ ಪ್ರಕರಣಗಳು ದಾಖಲಾಗಿರುತ್ತದೆ. |
| ಆ)ಕೊರೋನಾ ಸೋಂಕಿನಿಂದ ಮೃತಪಟ್ಟವರ ಪ್ರತಿ ಕುಟುಂಬಕ್ಕೆ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದಿಂದ ನೀಡಲಾಗುವ ಪರಿಹಾರದ ಮೊತ್ತ ಎಷ್ಟು; | ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಕೋವಿಡ್ ನಿಂದ ಮೃತಪಟ್ಟ ಎಲ್ಲಾ ಪ್ರಕರಣಗಳಲ್ಲಿ ರೂ.50,000/-ಗಳ ಪರಿಹಾರಧನವನ್ನು ರಾಜ್ಯ ವಿಪತ್ತು ಪರಿಹಾರ ನಿಧಿ (SDRF)ಯಿಂದ ನೇರ ಹಣ ಸಂದಾಯದ ಮೂಲಕ ಫಲಾನುಭವಿಗಳಿಗೆ ಪಾವತಿಸಲಾಗುತ್ತಿದೆ.<br>ಮುಂದುವರೆದು, ರಾಜ್ಯ ಸರ್ಕಾರವು ಘೋಷಿಸಿರುವಂತೆ ಕೋವಿಡ್-19 ವೈರಾಣು ಸೋಂಕಿನಿಂದಾಗಿ ಸದಸ್ಯರನ್ನು ಕಳೆದುಕೊಂಡಂತಹ ಬಡತನ ರೇಖೆಗಿಂತ ಕೆಳಗಿರುವ (ಬಿ.ಪಿ.ಎಲ್) ಕುಟುಂಬಕ್ಕೆ ಹೆಚ್ಚುವರಿಯಾಗಿ ರೂ.1.00 ಲಕ್ಷ ರೂಪಾಯಿ ಪರಿಹಾರವನ್ನು ಚೆಕ್ ಮೂಲಕ ಪಾವತಿಸಲಾಗುತ್ತಿದೆ. |
| ಇ)ಇಲ್ಲಿಯವರೆಗೆ ಎಷ್ಟು ಕುಟುಂಬಗಳಿಗೆ ವಿತರಣೆಯಾದ ಪರಿಹಾರ ಧನ ಎಷ್ಟು; | ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಕೋವಿಡ್ ನಿಂದ ಮೃತಪಟ್ಟ ಎಲ್ಲಾ ಪ್ರಕರಣಗಳಲ್ಲಿ ರೂ.50,000/-ಗಳ ಪರಿಹಾರಧನವನ್ನು ರಾಜ್ಯ ವಿಪತ್ತು ಪರಿಹಾರ ನಿಧಿ (SDRF)ಯಿಂದ ನೇರ ಹಣ ಸಂದಾಯದ ಮೂಲಕ ಫಲಾನುಭವಿಗಳಿಗೆ ಪಾವತಿಸಲಾಗುತ್ತಿದ್ದು, ದಿನಾಂಕ:10.02.2022 ರವರೆಗೆ ಪರಿಶೀಲಿಸಿ ಜಿಲ್ಲಾಧಿಕಾರಿಗಳು ಅನುಮೋದಿಸಲಾದ 27462 ಪ್ರಕರಣಗಳಿಗೆ ತಲಾ ರೂ.50,000/- ದಂತೆ ಪರಿಹಾರ ವಿತರಣೆಗೆ ಕ್ರಮವಹಿಸಲಾಗಿದೆ.<br>ಮುಂದುವರೆದು, ರಾಜ್ಯ ಸರ್ಕಾರವು ಬಿ.ಪಿಎಲ್ ಕುಟುಂಬದವರಿಗೆ ಘೋಷಿಸಿರುವ ಹೆಚ್ಚುವರಿ ರೂ.1.00 ಲಕ್ಷ ಪರಿಹಾರಕ್ಕಾಗಿ ದಿನಾಂಕ:10.02.2022 ರವರೆಗೆ ಒಟ್ಟು 13698 ಅರ್ಜಿಗಳು ಸ್ವೀಕೃತವಾಗಿದ್ದು, ಪರಿಶೀಲನೆಯ ನಂತರ ಜಿಲ್ಲಾಧಿಕಾರಿಗಳು/ಬಿಬಿಎಂಪಿ ಜಂಟಿ ಆಯುಕ್ತರಿಂದ ಅನುಮೋದನೆಯಾದ 13698 ಪ್ರಕರಣಗಳಿಗೆ ತಲಾ ರೂ.1.00 ಲಕ್ಷ ಪರಿಹಾರವನ್ನು ಚೆಕ್ ಮೂಲಕ ವಿತರಿಸಲು ಕ್ರಮವಹಿಸಲಾಗಿದೆ. |

C

| | |
|---|---|
| ಈ)ಪರಿಹಾರ ಧನ ವಿತರಣೆಯಲ್ಲಿ ಎದುರಾಗುತ್ತಿರುವ ತೊಡಕುಗಳನ್ನು ನಿವಾರಿಸಿ ಎಲ್ಲಾ ಅರ್ಹ ಕುಟುಂಬಗಳಿಗೆ ಶೀಘ್ರವಾಗಿ ಪರಿಹಾರ ವಿತರಣೆಯಾಗುವ ನಿಟ್ಟಿನಲ್ಲಿ ಸರ್ಕಾರ ಕೈಗೊಳ್ಳುತ್ತಿರುವ ಕ್ರಮಗಳೇನು? | ಕೋವಿಡ್ ಪರಿಹಾರ ಧನ ವಿತರಣೆಯಲ್ಲಿ ಯಾವುದೇ ತೊಡಕು ಕಂಡುಬಂದಿರುವುದಿಲ್ಲ. ಅರ್ಜಿ ಸಲ್ಲಿಸುವ ಕುರಿತು ಪತ್ರಿಕೆಗಳಲ್ಲಿ, ರೇಡಿಯೋ ಹಾಗೂ ದೂರದರ್ಶನಗಳ ಮೂಲಕ ಕೋವಿಡ್ ಪರಿಹಾರ ಪಡೆಯುವಲ್ಲಿ ಅಗತ್ಯ ಮಾಹಿತಿಯೊಂದಿಗೆ ಜಾಹೀರಾತು ನೀಡಿ ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಗಿದೆ. ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಕೋವಿಡ್ ನಿಂದ ಮೃತಪಟ್ಟ ಎಲ್ಲಾ ಪ್ರಕರಣಗಳಲ್ಲಿ ರೂ.50,000/-ಗಳ ಪರಿಹಾರಧನವನ್ನು ರಾಜ್ಯ ವಿಪತ್ತು ಪರಿಹಾರ ನಿಧಿ (SDRF)ಯಿಂದ ನೇರ ಹಣ ಸಂದಾಯದ ಮೂಲಕ ಫಲಾನುಭವಿಗಳಿಗೆ ಪಾವತಿಸಲಾಗುತ್ತಿದ್ದು, ಉಳಿಕೆ, ಅರ್ಜಿದಾರರ ಬ್ಯಾಂಕ್ ಖಾತೆ ಆಧಾರ್ ನೊಂದಿಗೆ ಜೋಡಣೆಯಾಗದ ಪ್ರಕರಣಗಳಲ್ಲಿ ಪರಿಹಾರ ಜಮಾ ಮಾಡಲು ಸಾಧ್ಯವಾಗದ ಕಾರಣ ಆಧಾರ್ ನ್ನು ಬ್ಯಾಂಕ್ ಖಾತೆಗೆ ಜೋಡಣೆ ಮಾಡಿಕೊಳ್ಳುವಂತೆ ಅರ್ಜಿದಾರರ ಮೊಬೈಲ್ ಗೆ SMS ಕಳುಹಿಸಲಾಗುತ್ತಿದೆ ಹಾಗೂ ಜಿಲ್ಲಾ / ತಾಲ್ಲೂಕು ಆಡಳಿತ ಮೂಲಕ ಫಲಾನುಭವಿಗಳಿಗೆ ಅರಿವು ಮೂಡಿಸಿ ಪರಿಹಾರ ವಿತರಣೆಗೆ ಕ್ರಮವಹಿಸಲಾಗುತ್ತಿದೆ. |

**ಸಂ. DSSP- LCQ/1/2022**

**(ಆರ್.ಅಶೋಕ)**
**ಕಂದಾಯ ಸಚಿವರು**